**ಓ ಎಸ್ ನಂ. :1/2019**
**ಪಿ.ಡಬ್ಲ್ಯೂ:1**

ಸಾಕ್ಷಿಯನ್ನು ದಿಃ 18-08-2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟಿ ಸವಾಲುಃ2 ನೇ ಪ್ರತಿವಾದಿ ಪರಃ ಶ್ರೀ ಪಿ.ಎನ್.ಹೆಚ್. ವಕೀಲರಿಂದಃ**

ನಾನು ಉಳಿದ ವಾದಿಗಳ ಪರವಾಗಿಯೂ ಸಹ ಸಾಕ್ಷ್ಯ ನುಡಿಯುತ್ತಿದ್ದೇನೆ. ಗಣಪತಿ ದಾಮೋದರ ದೇಶಭಂಡಾರಿ ನನ್ನ ಅಜ್ಜ. ಗಣಪತಿ ದಾಮೋದರ ದೇಶಭಂಡಾರಿಯವರ ನಾಲ್ಕು ಜನ ಮಕ್ಕಳು ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ದಾಮುರವರು ಹಾಗೂ ನನ್ನ ತಂದೆ ಗಣೇಶ ರವರು ಬೇರೆ ಬೇರೆ ಇದ್ದು, ನನ್ನ ತಂದೆ ಹಾಗೂ ದಾಮುರವರು ಪ್ರತ್ಯೇಕವಾಗಿ ವಾಸ ಮಾಡಿಕೊಂಡ ಬಂದಿರುತ್ತಾರೆ.

ಅಸಲು ದಾವಾ ಸಂಖ್ಯೆ 157/1989 ರಲ್ಲಿ ಸಲ್ಲಿಸಲಾದ ವಿಭಾಗದ ದಾವೆಯಲ್ಲಿ ನಮ್ಮ ಕವಲನ್ನು ನನ್ನ ತಂದೆಯಾದ ಗಣೇಶರವರು ಪ್ರತಿನಿಧಿಸಿದ್ದು, ದಾಮುರವರ ಕವಲನ್ನು ದಾಮುರವರು ಪ್ರತಿನಿಧಿಸಿದ್ದರು ಎಂದರೆ ಸರಿ. ಸದರಿ ದಾವೆಯ ಸಮನ್ಸ ನನ್ನ ತಂದೆ ಹಾಗೂ ದಾಮುರವರಿಗೆ ಕಳುಹಿಸಲಾಗಿತ್ತು ಎಂದರೆ ನನಗೆ ಮಾಹಿತಿ ಇಲ್ಲ, ಆ ಸಂದರ್ಭದಲ್ಲಿ ನಾನು ಸಣ್ಣವನಿದ್ದೆನು ಎಂದು ನುಡಿಯುತ್ತಾರೆ. ನಾನು ಪ್ರಸ್ತುತ ದಾವೆಯನ್ನು ಸಲ್ಲಿಸುವ ಸಂದರ್ಭದಲ್ಲಿ ಅಸಲು ದಾವಾ ಸಂಖ್ಯೆ 157/1989 ರ ದಾಖಲಾತಿಗಳನ್ನು ನಾನು ವಕೀಲರಿಗೆ ನೀಡಿರುವುದಿಲ್ಲ. ಅಸಲು ದಾವಾ ಸಂಖ್ಯೆ 157/1989 ರ ದಾವೆಗೆ ಸಂಬಂಧಪಟ್ಟಂತೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ವಾದ ಪತ್ರದಲ್ಲಿ ಅಸಲು ದಾವಾ ಸಂಖ್ಯೆ 157/1989 ರಲ್ಲಿ ಆದ ಆದೇಶದ ಮೇರೆಗೆ ದಾವಾ 7 ನೇ ಐಟಂ ಸ್ವತ್ತನ್ನು 3 ನೇ ಪ್ರತಿವಾದಿಗೆ ನೀಡಲಾಗಿತ್ತು ಎಂದು ನಾನು ಹೇಳಿ ಬರೆಸಿರುವುದಿಲ್ಲ.

ಅಸಲು ದಾವಾ ಸಂಖ್ಯೆ 157/1989 ರ ದಾವೆಯಲ್ಲಿ ಗಣಪತಿ ದಾಮೋದರ ದೇಶಭಂಡಾರಿರವರ ನಾಲ್ಕು ಜನ ಮಕ್ಕಳಿಗೆ ¼ ಹಿಸ್ಸಾಂಶ ಇರುವುದಾಗಿ ಆದೇಶ ಆಗಿತ್ತು ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 157/1989 ರಲ್ಲಿ ಆದ ಪ್ರಾಥಮಿಕ ಡಿಕ್ರೀಯ ಆದೇಶದ ಮೇರೆಗೆ ಅಂತೀಮ ಡಿಕ್ರೀಗಾಗಿ ಎಫ್.ಡಿ.ಪಿ. ಸಂಖ್ಯೆ: 6/1995 ನ್ನು ದಾಖಲಿಸಲಾಗಿತ್ತು ಎಂದರೆ ಸರಿಯಲ್ಲ. ಎಫ್.ಡಿ.ಪಿ. ಸಂಖ್ಯೆ: 6/1995 ರಲ್ಲಿ ನೇಮಕವಾದ

ನ್ಯಾಯಾಲಯದ ನಿಯೋಗಿಯವರು ಸ್ಥಳಕ್ಕೆ ಭೇಟಿ ನೀಡಿ ಸ್ವತ್ತುಗಳನ್ನು ಪ್ರಾಥಮಿಕ ಡಿಕ್ರೀಯ ಆದೇಶದಂತೆ ವಿಂಗಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾಯಾಲಯದ ನಿಯೋಗಿಯವರು ಸಲ್ಲಿಸಿದ ವರದಿಯನ್ನು ಸ್ವೀಕರಿಸಿ ಅಂತೀಮ ಡಿಕ್ರೀಯನ್ನು ಸಹ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

ಅಂತೀಮ ಡಿಕ್ರೀಯಲ್ಲಿ ಆದ ಆದೇಶದಂತೆ ಲಕ್ಷ್ಮಣ ಮತ್ತು ಕೃಷ್ಣಾರವರು ತಮ್ಮ ಹಿಸ್ಸೆಯ ಸ್ವತ್ತನ್ನು ಪ್ರತ್ಯೇಕಿಸಿಕೊಂಡು ಅವರವರ ಹಿಸ್ಸೆಯಲ್ಲಿ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಯಾವುದೇ ಆದೇಶದ ಮೇರೆಗೆ  ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಿಲ್ಲ ಆದರೆ ಅವರವರ  ಸ್ವತ್ತಿನಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

ಅಸಲು ದಾವಾ ಸಂಖ್ಯೆ 157/1989 ರಲ್ಲಿ ಆದ ಆದೇಶದ ವಿರುದ್ಧ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ.  ಸರ್ವೇ ನಂ. 15 ರಲ್ಲಿ 33 ಗುಂಟೆ ವಿಸ್ತೀರ್ಣದ ಕ್ಷೇತ್ರ 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ತಂದೆಯಾ ಲಕ್ಷ್ಮಣ ದೇಶಭಂಡಾರಿರವರಿಗೆ ಸರ್ವೇ ನಂ. 15 ರ ಸ್ವತ್ತು ಭೂ ನ್ಯಾಯಮಂಡಳಿಯಿಂದ ಮಂಜೂರಿಯಾಗಿರುತ್ತದೆ ಎಂದರೆ ಸರಿ.  2 ನೇ ಪ್ರತಿವಾದಿಗೆ ಸರ್ವೇ ನಂ. 5 ರ ಸ್ವತ್ತನ್ನು ಮರಣ ಶಾಸನದ ಮುಖಾಂತರ ಆತನ ತಂದೆ ನೀಡಿರುತ್ತಾರೆ ಎಂದರೆ ಸರಿ. ಆದಕಾರಣ ಸದರಿ ಸ್ವತ್ತು 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಆಗಿದ್ದು, ನಮಗೆ ಹಕ್ಕು ಇರುವುದಿಲ್ಲ ಎಂದರೆ ಸರಿ.  ಅಸಲು ದಾವಾ ಸಂಖ್ಯೆ 157/1989 ರಲ್ಲಿ ಸರ್ವೇ ನಂ. 15 ರ ಸ್ವತ್ತು  ಲಕ್ಷ್ಮಣ ದೇಶಭಂಡಾರಿರವರ ಸ್ವಯಾರ್ಜಿತ ಆಸ್ತಿ ಆಗಿರುವುದಾಗಿ ತೀರ್ಮಾನಿಸಲಾಗಿತ್ತು ಎಂದರೆ ಸರಿ.  ಅಸಲು ದಾವಾ ಸಂಖ್ಯೆ 157/1989 ರಲ್ಲಿ ಆದ ಆದೇಶದ ವಿರುದ್ಧ ನನ್ನ ತಂದೆ ಮೇಲ್ಮನವಿ ಸಲ್ಲಿಸಿದ್ದರು. ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಸರಿ.

ಕುಟುಂಬದ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಅಸು ದಾವಾ ಸಂಖ್ಯೆ 157/1989 ರಲ್ಲಿ ಆದೇಶ ಆದ ಕಾರಣ ವಿಭಜನೆ ಕೋರಿ ಸಲ್ಲಿಸಿರುವ ಪ್ರಸ್ತುತ ದಾವೆ ಊರ್ಜಿತವಾಗತಕ್ಕದಲ್ಲ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಕೇಳಿದಂತಹ ಯಾವುದೇ ಪರಿಹಾರಗಳಿಗೆ ಅರ್ಹನಿರುವುದಿಲ್ಲ ಎಂದರೆ ಸರಿಯಲ್ಲ.

**ಓ ಎಸ್ ನಂ. :1/2019**
**ಪಿ.ಡಬ್ಲ್ಯೂ:1**

**<u>ಪಾಟಿ ಸವಾಲುಃ</u>** 4 ರಿಂದ 6, 8 ರಿಂದ 10 ಮತ್ತು 14 ನೇ ಪ್ರತಿವಾದಿ ಗಳು ಗೈರು ಹಾಜರಿದ್ದು ಅವರ ಪರ ವಕೀಲರು ಪ್ರತಿನಿಧಿಸದೇ ಇದ್ದು ಪಾಟೀ ಸವಾಲಿಗೆ ಸಮಯ ನೀಡಲು ಯಾವುದೇ ಸಕಾರಣಗಳು ಕಂಡು ಬರದು ಕಾರಣ ಅವರುಗಳ ಪರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ
Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಕುಮಟಾ